## ಬಜೆಟ್ ಎಫೆಕ್ಟ್: ಷೇರುಪೇಟೆ ಕುಸಿತ

ಸಂಸತ್ತಿನಲ್ಲಿ ಗುರುವಾರ ಬಜೆಟ್ ಮಂಡನೆಯಾಗುತ್ತಿದ್ದಂತೆ ಮುಂಬೈ ಷೇರು ಪೇಟೆಯಲ್ಲಿ ಏರಿಕೆ ಕಂಡು ಬಂದಿತ್ತಾದರೂ, ಕೊನೆಗೆ ಕುಸಿತ ಕಂಡಿತು. ಮಂಡನೆ ಮುಗಿದ ಬಳಿಕ ಕುಸಿದ ಷೇರುಪೇಟೆ ಯಲ್ಲಿ ನಿಫ್ಟಿ 103 ಅಂಕ ಇಳಿಕೆ ಕಂಡು 5693ರಲ್ಲಿ ಅಂತ್ಯಗೊಂಡಿತು. ಇದೇ ರೀತಿ, ಸೆನ್ಸೆಕ್ಸ್ ಸೂಚ್ಯಂಕ 290 ಅಂಕ ಕುಸಿತ ಕಂಡಿದ್ದು, 18861ರಲ್ಲಿ ಮುಕ್ತಾಯವಾಗಿದೆ.

## ಖಾಸಗಿ ಸಹಭಾಗಿತ್ವದಲ್ಲಿ ಕಲ್ಲಿದ್ದಲು

ಹೇರಳವಾಗಿ ಕಲ್ಲಿದ್ದಲಿನ ಲಭ್ಯತೆ ಇದ್ದರೂ ಕಲ್ಲಿದ್ದಲು ಆಮದು ಮತ್ತು ದೀರ್ಘಾವಧಿಯಲ್ಲಿ ಕಲ್ಲಿದ್ದಲಿನ ಆಮದು ಮೇಲಿನ ಹೊಂದಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಖಾಸಗಿ ಮತ್ತು ಸ ಉತ್ಪಾದಿಸಿ, ಆದನ್ನು ಶಾಖೋತ್ಪನ್ನ ಕೇಂದ್ರಗಳು ಮತ್ತು ಇತ ನೀತಿಯೊಂದು ಭಾರತೀಯ ಕಲ್ಲಿದ್ದಲು ನಿಯಮಿತದ ಸಹಯ

■ ಬೆಂಗಳೂರು-ಚೆನ್ನೈ; ಬೆಂಗಳೂರು - ಮುಂಬೈ ■ 6 ಕೈಗಾರಿಕಾ ವಲಯ ಸ್ಥಾಪಿಸಲು ಸಿದ್ಧತೆ

# ರಾಜ್ಯಕ್ಕೆ ಜೋಡಿ ಕಾರಿಡಾರ್

**ಬೆಂಗಳೂರು:** ಬೆಂಗಳೂರು - ಮುಂಬೈ ಮತ್ತು ಬೆಂಗಳೂರು- ಚೆನ್ನೈ ಕೈಗಾರಿಕಾ ಕಾರಿಡಾರ್‌ಗಳ ಅಭಿವೃದ್ಧಿ ವಿಚಾರ ಬಜೆಟ್‌ನಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಈ ಎರಡು ಯೋಜನೆಗಳು ರಾಜ್ಯದ ಕೈಗಾರಿಕೆ ಅಭಿವೃದ್ಧಿಗೆ ದಿಕ್ಸೂಚಿಯಾಗಲಿವೆ.

ಉದ್ದೇಶಿತ ಬೆಂಗಳೂರು ಮತ್ತು ಮುಂಬೈ ನಡುವಿನ ಕೈಗಾರಿಕಾ ಕಾರಿಡಾರ್‌ನಿಂದ ರಾಜ್ಯದ ಉತ್ತರ ಭಾಗಗಳಲ್ಲಿ ಕೈಗಾರಿಕೀಕರಣ ಸಾಧ್ಯವಾಗಲಿದೆ. 11 ಜಿಲ್ಲೆಗಳು ಮತ್ತು ಸುಮಾರು 20 ಕೈಗಾರಿಕ ಪಟ್ಟಣಗಳು ಆ ವ್ಯಾಪ್ತಿಗೆ ಬರಲಿವೆ. ಕರ್ನಾಟಕ ಕೈಗಾರಿಕರಣ ನೀತಿ ಸಹ ಬೆಂಗಳೂರು ಮುಂಬೈ ಕೈಗಾರಿಕಾ ಕಾರಿಡಾರ್ ಬಗ್ಗೆ ಪ್ರಸ್ತಾಪಿಸಿದೆ. ಕಾರಿಡಾರ್‌ನಲ್ಲಿ 6 ಕೈಗಾರಿಕಾ ವಲಯಗಳನ್ನು ಸ್ಥಾಪಿಸುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ. ಆಟೋಮೊಬೈಲ್ ಕ್ಷೇತ್ರ, ಟೆಕ್ಸ್‌ಟೈಲ್, ಆಹಾರ ಸಂಸ್ಕರಣೆ, ಸಿದ್ಧ ಉಡುಪು ಕಾರ್ಖಾನೆ ಸೇರಿದಂತೆ ಪ್ರಮುಖ ಉದ್ದಿಮೆಗಳು ತಲೆ ಎತ್ತಲು ಈ ಯೋಜನೆ ಪೂರಕವಾಗಿದೆ.

ಚೆನ್ನೈ- ಬೆಂಗಳೂರು ಕಾರಿಡಾರ್ ಸಹ ರಾಜ್ಯದ ಬೆಳವಣಿಗೆಗೆ ಸಹಕಾರಿಯಾಗಿದೆ. ಕರ್ನಾಟಕ ಸರ್ಕಾರ ಕಾರಿಡಾರ್ ವ್ಯಾಪ್ತಿಯಲ್ಲಿ ಈಗಾಗಲೇ ಸುಮಾರು 4 ಸಾವಿರ ಭೂಮಿಯನ್ನು ವಶಪಡಿಸಿಕೊಂಡಿದ್ದು ಕೋಲಾರ , ಮುಳಬಾಗಿಲು ಮತ್ತು ಹೊಸಕೋಟೆ ಪ್ರದೇಶಗಳಲ್ಲಿ ಕೈಗಾರಿಕಾ ಪಾರ್ಕ್ ನಿರ್ಮಿಸುವ ಯೋಜನೆ ಹಾಕಿಕೊಂಡಿದೆ. ಮುಳಬಾಗಿಲಿನಲ್ಲೇ ಸುಮಾರು 1,200 ಎಕರೆ ಭೂಮಿ ವಶಪಡಿಸಿಕೊಳ್ಳಲಾಗಿದ್ದು ಗಾರ್ಮೆಂಟ್ ಉದ್ಯಮ ಪ್ರೋತ್ಸಾಹಿಸಲು ಚಿಂತಿಸಲಾಗಿದೆ.

ವಿತ್ತ ಸಚಿವ ಪಿ. ಚಿದಂಬರಂ ಕೈಗಾರಿಕಾ ಕಾರಿಡಾರ್‌ಗಳ ಬಗ್ಗೆ ಪ್ರಸ್ತಾಪಿಸಿರುವುದರಿಂದ ಕೈಗಾರಿಕಾ ಕ್ಷೇತ್ರದ ಪ್ರತಿನಿಧಿಗಳು ಹರ್ಷ ವ್ಯಕ್ತಪಡಿಸಿದ್ದಾರೆ. ಎಲ್ಲಾ ಕೈಗಾರಿಕೆ ಸಂಘಟನೆಗಳು ಮತ್ತು ಸಂಸ್ಥೆಗಳು ಕಾರಿಡಾರ್ ಸ್ಥಾಪನೆಯ ನಿಲುವನ್ನು ಶ್ಲಾಘಿಸಿವೆ.



ಎರಡು ಕೈಗಾರಿಕ ಕಾರಿಡಾರ್‌ಗಳು ರಾಜ್ಯದ ಅಭಿವೃದ್ಧಿಗೆ ಪೂರಕವಾಗಿದ್ದು ವಿತ್ತ ಸಚಿವರನ್ನು ಅಭಿನಂದಿಸುತ್ತೇನೆ. ಈ ಯೋಜನೆಯಿಂದ ರಾಜ್ಯದ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿ ಸಾಧ್ಯವಾಗುವ ಜೊತೆಗೆ ಕೈಗಾರಿಕರಣ, ಉದ್ಯೋಗ, ಆರ್ಥಿಕ ಪ್ರಗತಿಯೂ ಆಗಲಿದೆ.



-ಮುರುಗೇಶ್ ನಿರಾಣಿ,
ಕೈಗಾರಿಕಾ ಸಚಿವ




# ಹುಸಿಯಾದ ನಿರೀಕ್ಷೆ; ಐಟಿಬಿಟಿಗೆ ಸಿಗದ ನೆರವು

■ ರುದ್ರಣ್ಣ ಹರ್ತಿಕೋಟೆ

**ಬೆಂಗಳೂರು:** ಕೇಂದ್ರ ವಿತ್ತ ಸಚಿವ ಪಿ. ಚಿದಂಬರಂ ತಮ್ಮ ಬಜೆಟ್‌ನಲ್ಲಿ ರಾಜ್ಯದ ನಿರೀಕ್ಷೆಯನ್ನು ಹುಸಿಗೊಳಿಸಿದ್ದಾರೆ. ರಾಜ್ಯಕ್ಕೆ ಕೊಡುಗೆ ನೀಡಿರುವ ಎರಡು ಕಾರಿಡಾರ್‌ಗಳು ಹೊಸವೇನು ಆಲ್ಲ. ರಾಜ್ಯಕ್ಕೆ ವಿಶೇಷವಾದ ಯಾವುದೇ ಯೋಜನೆಯನ್ನು ಘೋಷಿಸಿಲ್ಲ.

ಇನ್ನು ಮೂರು ತಿಂಗಳಿಗೆ ರಾಜ್ಯ ಚುನಾವಣೆಗೆ ತೆರಳುತ್ತಿದೆ. ಇದರಿಂದಾಗಿ ಕಾಂಗ್ರೆಸ್‌ಗೆ ಅನುಕೂಲವಗಲು ಕೆಲ ಯೋಜನೆಗಳನ್ನು ಚಿದಂಬರಂ ನೀಡಬಹುದೆಂಬ ರಾಜ್ಯದ ಜನತೆಯ ಆಸೆ ಈಡೇರಿಲ್ಲ. ರಾಜ್ಯಕ್ಕೆ ನೀಡಿರುವ ಕಾರಿಡಾರ್‌ಗಳು ತಕ್ಷಣಕ್ಕೆ ಫಲ ನೀಡುವ ಯೋಜನೆಗಳು ಅಲ್ಲ ಎಂಬುದು ಇಲ್ಲಿ ವಿಶೇಷ.

ಬೆಂಗಳೂರು-ಚೆನ್ನೈ ಮತ್ತು ಬೆಂಗಳೂರು-ಮುಂಬೈ ಕಾರಿಡಾರನ್ನು ಚಿದಂಬರಂ ನೀಡಿದ್ದಾರೆ. ಆದರೆ ಈ ಎರಡು ಕಾರಿಡಾರ್‌ಗಳ ನೀಲನಕ್ಷೆ ಸಿದ್ಧವಾಗಿ ಮೂರು ವರ್ಷಗಳು ಕಳೆದು ಹೋಗಿದೆ. ಜಪಾನ್ ಸರ್ಕಾರ ಈಗಾಗಲೇ ಎರಡು ಕಾರಿಡಾರ್‌ಗಳಿಗೆ ಹಣ ಹೂಡಿಕೆಯ ಬಗ್ಗೆ ಆಸಕ್ತವಾಗಿದೆ. ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದ ಬ್ರಿಟನ್ ಪ್ರಧಾನಿ ಕೆಮರೂನ್ ಬೆಂಗಳೂರು-ಮುಂಬೈ ಕಾರಿಡಾರ್ ಬಗ್ಗೆ ಆಸಕ್ತಿ ತೋರಿಸಿದ್ದರು. ಕೆಮರೂನ್ ಆಸಕ್ತಿಗೂ ಮೊದಲೇ ಕಾರಿಡಾರ್‌ನ ನೀಲನಕ್ಷೆ ಸಿದ್ಧವಾಗಿತ್ತು ಎಂಬುದು ಇಲ್ಲಿ ವಿಶೇಷ.

**ಯೋಜನೆ ನನಸಾಗುತ್ತಿದೆ:** ಬೆಂಗಳೂರು-ಚೆನ್ನೈ ಕಾರಿಡಾರ್ 2010ರಲ್ಲಿಯೇ ವಿವರವಾದ ಯೋಜನಾ ವರದಿ ಸಿದ್ಧವಾಗಿತ್ತು. ಜಪಾನಿಗರು ಭಾರತದಲ್ಲಿ ಆದರಲ್ಲೂ ಬೆಂಗಳೂರಿನಲ್ಲಿ ಹೂಡಿಕೆಗೆ ವಿಶೇಷ ಆಸಕ್ತಿ ತೋರಿಸುತ್ತಿರುವ ಫಲ ಆದು. ರಾಜ್ಯ ಸರ್ಕಾರ 2008ರಲ್ಲಿಯೇ ಇಂತಹದೊಂದು ಕಾರಿಡಾರ್ ನ ಅಗತ್ಯತೆ ಬಗ್ಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಆಗ ಜಪಾನ್ ಸಹಕಾರಿ ಬ್ಯಾಂಕ್ ಸಹ ತನ್ನ ಆಸಕ್ತಿಯನ್ನು ತೋರಿಸಿದ್ದರಿಂದಲೇ ರಾಜ್ಯ ಆಲ್ಲದೇ ನೆರೆಯ ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿಯೂ ಮೂಲಸೌಕರ್ಯ ಮತ್ತು ಕೈಗಾರಿಕೆ ಅಭಿವೃದ್ಧಿಯಾಗುವ ರೀತಿಯಲ್ಲಿ ಯೋಜನೆ ಸಿದ್ಧಗೊಳಿಸಲಾಗಿದೆ.

ಬೆಂಗಳೂರು ಹೊರವಲಯದ ಹೊಸಕೋಟೆಯಿಂದ ಚೆನ್ನೈ ಹೊರವಲಯದ ಶ್ರೀಪೆರಂಬದೂರು ತನಕ ಯೋಜನೆಯನ್ನು ರೂಪಿಸಲಾಗಿದೆ. ಇದೊಂದು ದೊಡ್ಡ ಬ್ಯುಸಿನೆಸ್ ಕಾರಿಡಾರ್ ಆಗಲಿದೆ. ರಾಜ್ಯದಲ್ಲಿ 74 ಕಿಮೀ, ಆಂಧ್ರಪ್ರದೇಶದಲ್ಲಿ 90 ಹಾಗೂ ತಮಿಳುನಾಡಿನಲ್ಲಿ 94 ಕಿ.ಮೀ. ವ್ಯಾಪ್ತಿ ಪ್ರದೇಶದಲ್ಲಿ ಈ ಕಾರಿಡಾರ್ ಹರಿದು ಹೋಗಲಿದೆ.

ಮೂಲಸೌಕರ್ಯ ಅಭಿವೃದ್ಧಿಗೆ ಪ್ರತಿ ಕಿಮೀ ರಸ್ತೆಯನ್ನು 20 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವುದು, ರಾಜ್ಯದ ಹೊಸಕೋಟೆ, ಬಂಗಾರಪೇಟೆ, ಆಂಧ್ರಪ್ರದೇಶದ ಪಲಮನೇರ್ ಮತ್ತು ಚಿತ್ತೂರು ಹಾಗೂ ತಮಿಳುನಾಡಿನ ಶ್ರೀಪೆರಂಬದೂರುಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸುವುದು ಯೋಜನೆಯಲ್ಲಿ ಸೇರಿದೆ. ಸಿಮೆಂಟ್, ಉಕ್ಕು, ಆಹಾರ ಸಂಸ್ಕರಣೆ, ಐಟಿ-ಬಿಟಿ, ಆಟೋಮೊಬೈಲ್, ಪೆಟ್ರೋ, ಕೆಮಿಕಲ್, ಔಷಧಿ ವಲಯಗಳನ್ನು ಸ್ಥಾಪಿಸುವುದು ಯೋಜನೆಯ ಭಾಗವಾಗಿದೆ.

ರಾಜ್ಯ ಸರ್ಕಾರ ಕೇಂದ್ರಕ್ಕೆ 2008ರಲ್ಲಿ ಪ್ರಸ್ತಾವನೆ ಸಲ್ಲಿಸಿದಾಗಲೇ ಈ ಯೋಜನೆಯನ್ನು ಮುಂಬೈ ತನಕ ವಿಸ್ತರಣೆ ಮಾಡುವಂತೆ ಕೋರಿತ್ತು.

ರಾಜ್ಯ ಸರ್ಕಾರ ಸಿದ್ಧಪಡಿಸಿದ ಬೆಂಗಳೂರು-ಮುಂಬೈ ಯೋಜನೆಯ ಪ್ರಕಾರ ನರಸಾಪುರ, ತುಮಕೂರು, ಭರಮಸಾಗರ, ಹಾವೇರಿ, ಬೇಲೂರು, ಹುಕ್ಕೇರಿಗಳಲ್ಲಿ ತಲಾ 5 ಸಾವಿರ ಎಕರೆಯನ್ನು ವಶಪಡಿಸಿಕೊಂಡು ಯೋಜನೆ ಜಾರಿಗೆ ತರುವುದನ್ನು ರಾಜ್ಯ ಸಿದ್ಧಪಡಿಸಿರುವ ಯೋಜನೆಯಾಗಿದೆ. ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ರಾಜ್ಯ ಈ ಯೋಜನೆ ರೂಪಿಸಿತ್ತು.

## ಜಾರಿ ಯಾವಾಗ?

ರಾಜ್ಯ ರೂಪಿಸಿದ್ದ ಯೋಜನೆಗಳಿಗೆ ಕೇಂದ್ರ ಈಗ ಬಜೆಟ್‌ನಲ್ಲಿ ಘೋಷಣೆ ಮಾಡಿದೆ. ಆದರೆ ಎರಡು ಯೋಜನೆಗಳಿಗೆ ಸಾವಿರಾರು ಎಕರೆ ಭೂಮಿ ಸ್ವಾದೀನದ್ದು ಸಮಸ್ಯೆಯಾಗಲಿದೆ. ತಕ್ಷಣಕ್ಕೆ ಜಾರಿಗೆ ಬರುವ ಯೋಜನೆಗಳೇನು ಅಲ್ಲ.

## ಯೋಜನೆ ಪ್ರಯೋಜನವೇನು?

- ರಾಜ್ಯದಲ್ಲಿ ಕೈಗಾರಿಕಾ ಪ್ರಗತಿ
- ಉತ್ತರ ಕರ್ನಾಟಕದ ಜಿಲ್ಲೆಗಳ ಅಭಿವೃದ್ಧಿ
- ರಾಜ್ಯದ 11ಕ್ಕೂ ಹೆಚ್ಚು ಜಿಲ್ಲೆಗಳ ಪ್ರಗತಿ
- ಲಕ್ಷಾಂತರ ಉದ್ಯೋಗ ಸೃಷ್ಟಿ
- ದೇಶದ ಉತ್ಪಾದನೆ ಹೆಚ್ಚಳ
- ಆರ್ಥಿಕ ಸುಧಾರಣೆ

## ಬೆಂಗಳೂರು -ಮುಂಬೈ ಕಾರಿಡಾರ್

- 550 ಕಿ.ಮೀ. ರಸ್ತೆ ಮಾರ್ಗ (ಕರ್ನಾಟಕದಲ್ಲಿ)
- 330 ಕಿ.ಮೀ. ರೈಲು ಮಾರ್ಗ (ಕರ್ನಾಟಕದಲ್ಲಿ)

## ಕಾರಿಡಾರ್‌ನ ಪ್ರಮುಖ ಕೈಗಾರಿಕ ಪ್ರದೇಶಗಳು

- ವಸಂತ್ ನರಸಾಪುರ( ತುಮಕೂರು)
- ಭರಮಸಾಗರ (ಚಿತ್ರದುರ್ಗ)
- ಶಿವಮೊಗ್ಗ
- ಸವಣೂರು (ಹುಬ್ಬಳ್ಳಿ)
- ಹಾವೇರಿ
- ಗದಗ
- ಬೆಲೂರು (ಧಾರವಾಡ)
- ಹುಕ್ಕೇರಿ ( ಬೆಳಗಾವಿ)
- ನವನಗರ ( ಬಾಗಲಕೋಟೆ)

## ರಾಜ್ಯದ ಬೇಡಿಕೆಗಳಿವು

ರಾಜ್ಯದ ಅನೇಕ ಬೇಡಿಕೆಗಳಿದ್ದವು. ಆದರೆ ಅವುಗಳತ್ತ ಚಿದಂಬರ್ ನಿರ್ಲಕ್ಷ್ಯ ತೋರಿಸಿದ್ದಾರೆ. ಐಐಟಿ ಬೇಕು ಎಂಬುದು ರಾಜ್ಯದ ಬಹುದಿನಗಳ ಬೇಡಿಕೆ. ಆದರೆ ಅದರ ಬಗ್ಗೆ ಗಮನವನ್ನೇ ಹರಿಸಿಲ್ಲ. ರಾಜ್ಯದ ವಿದ್ಯುತ್ ಯೋಜನೆಗಳಿಗೆ ಕಲ್ಲಿದ್ದಲು ನೀಡುವುದು, ಕುಸಿಯುತ್ತಿರುವ ಐಟಿ-ಬಿಟಿ ಉದ್ದಿಮೆ ಚೇತರಿಕೆಗೆ ನೆರವಾಗುವುದು, ರಾಜ್ಯದ ವಿವಿಗಳಿಗೆ ವಿಶೇಷ ನೆರವು ಸೇರಿದಂತೆ ಅನೇಕ ನಿರೀಕ್ಷೆಗಳಿದ್ದವು. ಆದರೆ ಅದಾವುದು ಈಡೇರಿಲ್ಲ.

## ಜಪಾನ್ ಚುನಾವಣೆ

ಜೈಕಾ ಬೆಂಗಳೂರು-ಚೆನ್ನೈ ಕಾರಿಡಾರ್‌ಗೆ 40 ರಿಂದ 50 ಬಿಲಿಯನ್ ಡಾಲರ್ ಹೂಡಿಕೆಗೆ ಸಿದ್ಧವಿದೆ. ದೇಶದಲ್ಲಿ ಹೂಡಿಕೆಯಲ್ಲಿ ಜಪಾನ್ ಪಾಲು ಶೇ.20ಕ್ಕೂ ಹೆಚ್ಚಿದೆ. ಜಪಾನ್‌ನ ಅನೇಕ ಸಂಸ್ಥೆಗಳು ಇಲ್ಲಿ ಹೂಡಿಕೆ ಮಾಡಲಿವೆ. ಉದ್ಯೋಗದ ಅವಕಾಶಗಳು ಸಿಗಲಿವೆ. ಆದರೆ ಜಪಾನ್‌ನಲ್ಲಿ ಈಗ ಚುನಾವಣೆಗಳು ನಡೆಯುತ್ತಿದ್ದು, ಅದು ಮುಗಿದ ನಂತರ ಜೈಕಾ ಮುಂದೆ ಬರಲಿದೆ ಎಂದು ಕೈಗಾರಿಕೆ ಇಲಾಖೆಯ ಮೂಲಗಳು ಸ್ಪಷ್ಟಪಡಿಸಿವೆ.